**2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು**

**S.C.No : 231/2022**

**ಸಾಕ್ಷಿಯನ್ನು ದಿನಾಂಕ 11.7.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿಜಯಕುಮಾರ್ | ಪಿ.ಡಬ್ಲ್ಯೂ-13 |
| ತಂದೆಯ/ಗಂಡನ ಹೆಸರು | : | ಸಿಂಗಚಾರಿ | ಸಿ.ಡಬ್ಲ್ಯೂ-15 |
| ವಯಸ್ಸು | : | 54 | |
| ಉದ್ಯೋಗ | : | ಮರ ಕೆಲಸ | |
| ವಾಸಸ್ಥಳ | : | ನಾಗನಹಳ್ಳಿ, ಮೈಸೂರು ತಾಲ್ಲೂಕು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

1. ಮೃತ ನಂಜಮ್ಮ ನನ್ನ ಪತ್ನಿಯ ತಾಯಿ. ಚಾಸಾ-1 ನನ್ನ ಪತ್ನಿಯ ಅಕ್ಕ. ಚಾಸಾ-13 ನನ್ನ ಪತ್ನಿಯ ಅಕ್ಕ. ಚಾಸಾ-7 ಚಾಸಾ-13 ಅವರ ಮಗ. ಚಾಸಾ-11 ನನ್ನ ಪತ್ನಿಯ ಅಕ್ಕ. ನಂಜಮ್ಮ ಅವರಿಗೆ 4 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಇದ್ದರು. 5 ಜನ ಮಕ್ಕಳಿಗೆ ಮದುವೆ ಆಗಿದೆ. ನಂಜಮ್ಮ ಅವರ ಯಜಮಾನರು ಮೃತಪಟ್ಟಿದ್ದಾರೆ. ನಂಜಮ್ಮ ಮೂಲತಃ ದರಸಗುಪ್ಪೆ ಗ್ರಾಮ, ನಂಜಮ್ಮ ಅವರಿಗೆ ಸೇರಿದ ಹೆಬ್ಬಾಳದ ಮನೆಯಲ್ಲಿ ವಾಸ ಇದ್ದರು. ನೆಲ ಅಂತಸ್ತು, 1 ನೇ ಅಂತಸ್ತು ಮತ್ತು 2 ನೇ ಅಂತಸ್ತು ಮನೆಗಳು ಇತ್ತು. ನೆಲ ಅಂತಸ್ತು ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರು. 1 ನೇ ಅಂತಸ್ತಿನಲ್ಲಿ ಆರೋಪಿಗಳು ವಾಸ ಇದ್ದರು. 2 ನೇ ಅಂತಸ್ತಿನಲ್ಲಿ ನಂಜಮ್ಮ ಮಾತ್ರ ವಾಸ

ಇದ್ದರು. 2 ನೇ ಅಂತಸ್ತಿನಲ್ಲಿ ಒಂದು ರೂಮ್, ಶೌಚಾಲಯ ಸೇರಿದಂತೆ ಸ್ನಾನದ ರೂಮ್ ಇತ್ತು. ನಂಜಮ್ಮ ಅವರು ಸ್ವತಃ ಊಟದ ವ್ಯವಸ್ಥೆ ಮಾಡಿಕೊಂಡಿದ್ದರು. ನಂಜಮ್ಮ ಮತ್ತು ಆರೋಪಿಗಳ ನಡುವೆ ವಿಶ್ವಾಸ ಇರಲಿಲ್ಲ. ನಂಜಮ್ಮ ಅವರ ಮಗ ಸಿದ್ದಪ್ಪಾಚಾರ ಮೃತಪಟ್ಟಿದ್ದಾರೆ. ಸಿದ್ದಪ್ಪಾಚಾರ ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಇದ್ದಾರೆ.

2. 2 ನೇ ಆರೋಪಿ ಲಾವಣ್ಯ ಅವರಿಗೆ ಮದುವೆ ಆಗಿದೆ. ಲಾವಣ್ಯ ಅವರು ಹೆರಿಗೆ ಸಲುವಾಗಿ ತನ್ನ ತವರು ಮನೆಗೆ ಬಂದಿದ್ದರು. ಸಿದ್ದಪ್ಪಾಚಾರ ಮೃತಪಟ್ಟ ನಂತರ ನಾನು, ನನ್ನ ಪತ್ನಿ ಮತ್ತು ಮಕ್ಕಳು ನಂಜಮ್ಮ ಅವರ ಮನೆಗೆ ಮತ್ತು ಆರೋಪಿಗಳು ವಾಸ ಇದ್ದ ಮನೆಗೆ ನಾನು ಹೋಗಿಲ್ಲ. ಆಗಾಗ ನನ್ನ ಅತ್ತೆ ನಂಜಮ್ಮ ನಮ್ಮ ಮನೆಗೆ ಬಂದು ನನ್ನ ಪತ್ನಿಯ ಹತ್ತಿರ ಕೆಲವು ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು ಈ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಅತ್ತೆ ಆಸ್ತಿಯನ್ನು ಹೆಣ್ಣು ಮಕ್ಕಳಿಗೂ ಸಹ ಪಾಲು ಕೊಡುವ ಬಗ್ಗೆ ಹೇಳಿಕೊಂಡಿದ್ದರು. ನನ್ನ ಪತ್ನಿ ಮತ್ತು ಅವರ ಅಕ್ಕ-ತಂಗಿಯರು ನಂಜಮ್ಮ ವಾಸ ಇದ್ದ ಮನೆಗೆ ಹೋಗುತ್ತಿರಲಿಲ್ಲ ಬದಲಾಗಿ ನಂಜಮ್ಮ ಅವರು ತಮ್ಮ ಹೆಣ್ಣು ಮಕ್ಕಳ ಮನೆಗೆ ಹೋಗಿ ಬರುತ್ತಿದ್ದರು.

3. ದಿಃ 03.10.2021 ರಂದು ಶಿವಕುಮಾರ್ ಅವರು ಮೊದಲಿಗೆ ನನ್ನ ಸಂಬಂಧಿ ಬಸವಚಾರ ಅವರಿಗೆ ಫೋನ್ ಮೂಲಕ ನಂಜಮ್ಮ ಅವರು ರೂಮಿನ ಬಾಗಿಲನ್ನು ತೆರೆಯುತ್ತಿಲ್ಲ ಎಂದು ತಿಳಿಸಿದ್ದು ಬಸವಚಾರ ಅವರು ಅದೇ ಮಾಹಿತಿಯನ್ನು ನನಗೆ ನೀಡಿದ್ದರು. ನಂಜಮ್ಮ ಅವರು ರೂಮಿನಲ್ಲಿ ಮಲಗಿಕೊಂಡಿದ್ದು ಕೂಗಿದರು ಏಳುತ್ತಿಲ್ಲ ಎಂದು ತಿಳಿಸಿದ್ದರು. ಮೊದಲಿಗೆ ಶಿವಕುಮಾರ್ ಮತ್ತು ಪ್ರತಾಪ್ ಅವರು ನಂಜಮ್ಮ ವಾಸ ಇದ್ದ ರೂಮಿನ ಬಳಿ ಹೋಗಿ ನೋಡಲಾಗಿ ಬಾಗಿಲಿನ ಡೋರ್ ಲಾಕ್ ಆಗಿತ್ತು. ಕಿಟಕಿ ಗಾಜು ಒಡೆದು ಹೋಗಿದ್ದು ಕಿಟಕಿಯಿಂದ ನೋಡಿದಾಗ ಡೋರ್ ಲಾಕ್ ಕೀ ಒಳಗಡೆ ಬಿದಿದ್ದ ಬಗ್ಗೆ ನನಗೆ ತಿಳಿಸಿದರು. ಮದ್ಯಾಹ್ನ 3.00-3.15 ರ ವೇಳೆಗೆ ನಾನು ಮತ್ತು ನನ್ನ ಪತ್ನಿ ನಂಜಮ್ಮ ವಾಸ ಇದ್ದ ರೂಮಿನ ಬಳಿ ಹೋದಾಗ ನಂಜಮ್ಮ ಅವರ 3 ಜನ ಹೆಣ್ಣು ಮಕ್ಕಳು ಸ್ಥಳಕ್ಕೆ ಬಂದಿದ್ದರು. ನಾನು ಹೋದಾಗ ರೂಮಿನ ಬಾಗಿಲು ತೆಗೆದಿರಲಿಲ್ಲ. ಪ್ರತಾಪ್ ಬಾಗಿಲನ್ನು ಕಾಲಿನಿಂದ ಒದ್ದು ತೆಗೆದಿದ್ದಾರೆ.

4. ಮೊದಲಿಗೆ ನಾಗಮ್ಮ ಮತ್ತು ಪದ್ಮ ಅವರು ಒಳಗಡೆ ಹೋಗಿ ನಂಜಮ್ಮ ಅವರನ್ನು ನೋಡಿ ಮೃತಪಟ್ಟಿರುವುದಾಗಿ ಹೇಳಿದ ನಂತರ ನಾನು ಒಳಗಡೆ ಹೋಗಿ ನೋಡಿದಾಗ ಚಾಪೆಯ ಮೇಲೆ ಹಾಸಿಗೆ ಮತ್ತು ಹಾಸಿಗೆಯ ಮೇಲೆ ನಂಜಮ್ಮ ಮುಖ ಮೇಲೆ ಮಾಡಿ ಮಲಗಿದ್ದ ಹಾಗೆ ಇದ್ದರು ಮತ್ತು ಮೃತಪಟ್ಟಿದ್ದರು. ನಂಜಮ್ಮ ಮೃತದೇಹದ ಮುಖದ ಮೇಲೆ ಪ್ಲಾಸ್ಟಿಕ್ ಕವರ್ ಹಾಕಿತ್ತು. ನಂಜಮ್ಮ ಅವರ ಕೈಗಳನ್ನು ಹಿಂಭಾಗದಲ್ಲಿ ಕಟ್ಟಿದ್ದರು. ನಂಜಮ್ಮ ಅವರ ಕತ್ತು ಮತ್ತು ಹಣೆಯ ಮೇಲೆ ಗಾಯಗಳು ಆದ ಬಗ್ಗೆ ನೋಡಿದ್ದೇನೆ. ನಂಜಮ್ಮ ಅವರನ್ನು ಸಾಯಿಸಿರುವುದಾಗಿ ತಿಳಿಯಿತು. ಘಟನೆ ಬಗ್ಗೆ ಚಾಸಾ-1 ಅವರು ದೂರು ಕೊಟ್ಟಿದ್ದಾರೆ. ಪೊಲೀಸರು ಸ್ಥಳಕ್ಕೆ ಬಂದು ಮೃತದೇಹವನ್ನು ಪರಿಶೀಲಿಸಿ ಮರಣೋತ್ತರ ಪರೀಕ್ಷೆಗೆ ತೆಗೆದುಕೊಂಡು ಹೋಗಿದ್ದರು.

ನಂಜಮ್ಮ ವಾಸವಿದ್ದ ಹೆಬ್ಬಾಳದ ಮನೆಯನ್ನು ನಂಜಮ್ಮನ ಮಗ ಸಿದ್ದಪ್ಪಾಚಾರಿ ರವರು ದರಸಗುಪ್ಪೆಯ ಮನೆಯನ್ನು ಮಾರಿ ಬಂದ ಹಣದಿಂದ ಕಟ್ಟಿದ್ದ. ದರಸಗುಪ್ಪೆಯಲ್ಲಿದ್ದ ಮನೆ ನಂಜಮ್ಮನ ಗಂಡನಿಂದ ಬಂದಿತ್ತು.

ದಿನಾಂಕ 3.10.2021ರಂದು ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ನಂತರ ದಿನಾಂಕ 5.10.2021 ಮತ್ತು 8.10.2021ರಂದು ಸಹ ಹೇಳಿಕೆ ನೀಡಿದ್ದೇನೆ. ಶವ ಪರೀಕ್ಷೆ ಬಳಿಕ ನನ್ನ ಅತ್ತೆ ನಂಜಮ್ಮಳನ್ನು ದೊಣ್ಣೆಯಿಂದ ಹೊಡೆದು ಸಾಯಿಸಿರುತ್ತಾರೆ ಎಂದು ಗೊತ್ತಾಯಿತು. ನಂಜಮ್ಮಳ ಕೈಕಾಲುಗಳನ್ನು ಕಟ್ಟಿದ್ದರು ಮತ್ತು ಮುಖಕ್ಕೆ ಪ್ಲಾಸ್ಟಿಕ್ ಕವರ ಹಾಕಿ ಸಾಯಿಸಿದ್ದರು. ನಂಜಮ್ಮ ವಾಸವಿದ್ದ ರೂಮಿಗೆ ಬೇರೆ ಯಾರು ಹೋಗುತ್ತಿರಲಿಲ್ಲ. ನಂಜಮ್ಮನವರೇ ತನಗೆ ಬೇಕಾದ ಊಟ ತಿಂಡಿ ಮಾಡಿಕೊಳ್ಳುತ್ತಿದ್ದರು. ನಾನು ನೋಡಿದಾಗ ನಂಜಮ್ಮನ ರೂಮಿನ ಡೋರ್ ಲಾಕ್ ಆಗಿತ್ತು, ಕಿಟಕಿ ಗಾಜು ಹೊಡೆದಿತ್ತು ಮತ್ತು ಡೋರ್ ಕೀ ರೂಂ ಒಳಗೆ ಬಿದ್ದಿತ್ತು. ಸೀತಾರ, ಲಾವಣ್ಯ, ಸಿದ್ದರಾಜು ಮತ್ತು ನಾಗಮ್ಮ ಇವರೇ ನನ್ನ ಅತ್ತೆ ನಂಜಮ್ಮಳನ್ನು ಕೊಲೆ ಮಾಡಿರುತ್ತಾರೆ ಎಂದು ನಂತರ ಗೊತ್ತಾಗಿರುತ್ತದೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎನ್.ಎನ್.ಆರ್ ವಕೀಲರಿಂದಃ**

ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ನಾನು ನಾಗನಹಳ್ಳಿಯಲ್ಲಿ ವಾಸವಿದ್ದೇನೆ. ಚಾಸ 1 ಪದ್ಮ ನನ್ನ ಹೆಂಡತಿಯ ಅಕ್ಕ ಮತ್ತು ಚಾಸ 8 ಪ್ರದೀಪ ಚಾಸ 1 ರವರ ಮಗ ಎಂದರೆ ನಿಜ. ಚಾಸ 1 ಪದ್ಮರವರ ಅಣ್ಣ ಸಿದ್ದಾಚಾರಿ ಎಂದರೆ ನಿಜ. ನ್ಯಾಯಾಲಯದ ಮುಂದಿರುವ ಆರೋಪಿತರು ನನ್ನ ಹೆಂಡತಿಯ ಅಣ್ಣನ ಮಕ್ಕಳು ಎಂದರೆ ನಿಜ. ನಾನು ಮದುವೆಯಾದ ಹೊಸತರಲ್ಲಿ ನಂಜಮ್ಮ, ಸಿದ್ದಾಚಾರಿ ಮತ್ತು ಆರೋಪಿತರು ಒಬ್ಬರಿಗೊಬ್ಬರು ಚನ್ನಾಗಿದ್ದರು ಎಂದರೆ ನಿಜ. ಸಿದ್ದಚಾರಿ ಮತ್ತು ಆತನ ಹೆಂಡತಿ ಮಕ್ಕಳು ನಂಜಮ್ಮನ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು ಎಂದರೆ ಸಿದ್ದಚಾರಿ ಇರುವವರೆಗೆ ನೋಡಿಕೊಳ್ಳುತ್ತಿದ್ದರು. ನನ್ನ ಮದುವೆ ಕಾಲಕ್ಕೆ ಸಿದ್ದಚಾರಿ ಎಲ್ಲ ಖರ್ಚು ಮಾಡಿ ನನ್ನ ಮದುವೆ ಮಾಡಿರುತ್ತಾರೆ ಎಂದರೆ ನಿಜ. ಸಿದ್ದಚಾರಿಯ ಮರಣದ ಬಳಿಕ ಅವರ ಹೆಂಡತಿ ಮತ್ತು ಮಕ್ಕಳು ನಂಜಮ್ಮಳನ್ನು ಚನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಂಜಮ್ಮ ನಮ್ಮ ಮನೆಗೆ ಬಂದಾಗ ತನ್ನ ಸೊಸೆ ಮತ್ತು ಮೊಮ್ಮಕ್ಕಳು ತನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಹೇಳುತ್ತಿದ್ದರು. ಸಿದ್ದಚಾರಿ ಮರಣದ ಬಳಿಕ ನಾನು ಅವರ ಮನೆಗೆ ಹೋಗುತ್ತಿರಲಿಲ್ಲ ಮತ್ತು ನಂಜಮ್ಮ ನಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಚಾರಿ ಮರಣದ ಬಳಿಕ ನಾಗಮ್ಮನವರು ನಂಜಮ್ಮನ ಹೆಸರಿಗೆ 49 ಸಾವಿರ ರೂ.ಗಳನ್ನು ಎಫ್.ಡಿ. ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಎಫ್.ಡಿ. ಗೆ 3 ನೇ ಆರೋಪಿ ಸಿದ್ದರಾಜು ವನ್ನು ನಾಮಿನಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಿದ್ದರಾಜು ಮರಣದ ಬಳಿಕ ನಾನು ನಾಗಮ್ಮ ಅಥವಾ ಆರೋಪಿಯ ಮನೆಗೆ ಹೋಗುತ್ತಿರಲಿಲ್ಲ ಎಂದರೆ ನಿಜ. ನಂಜಮ್ಮಳಿಗೆ ಅಂದಾಜು 75 ವರ್ಷವಾಗಿತ್ತು ಎಂದರೆ ನಿಜ. ನಂಜಮ್ಮಳಿಗೆ ಹೃದಯ ಖಾಯಿಲೆ ಹಾಗೂ ಕಣ್ಣು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ದರಸಗುಪ್ಪೆ ಮನೆ ಮಾರಿದ ಹಣದಲ್ಲಿ ಎಲ್ಲ ಹೆಣ್ಣು ಮಕ್ಕಳಿಗೂ ಪಾಲು ನೀಡಿದ್ದರು ಎಂದರೆ ಸರಿಯಲ್ಲ. ದರಸಗುಪ್ಪೆಯ ಮನೆ ಮಾರಿ ಬಂದ ಹಣದ ಪೈಕಿ ತನ್ನ ಪಾಲಿನ ಹಣ ಮತ್ತು ತನ್ನ ಸ್ವಂತ ಸಂಪಾದನೆಯ ಹಣದಿಂದ ಸಿದ್ದಚಾರಿ ಹೆಬ್ಬಾಳದ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದಚಾರಿ ತನ್ನ ಸ್ವಂತ ಹಣದಿಂದ ಕಟ್ಟಿದ ಮನೆಯಲ್ಲಿ ನಂಜಮ್ಮಳಿಗೆ ಒಂದು

ರೂಂ ಕಟ್ಟಿಕೊಟ್ಟಿದ್ದ ಎಂದರೆ ರೂಂ ಕಟ್ಟಿದ್ದು ನಿಜ. ನಾನು ಸಿದ್ದಚಾರಿ ಮನೆಗೆ ಹೋಗುತ್ತಿರಲಿಲ್ಲ ಎಂದರೆ ಸಿದ್ದಚಾರಿ ಇರುವವರೆಗೆ ಹೋಗುತ್ತಿದ್ದೆ, ಆದರೆ ಈಗ ಹೋಗುತ್ತಿಲ್ಲ. ನಂಜಮ್ಮ ಯಾವ ರೀತಿ ಸತ್ತಿದ್ದಳು ಎಂದು ನನಗೆ ಗೊತ್ತಿಲ್ಲ ಮತ್ತು ನಾನು ನಂಜಮ್ಮಳ ಶವ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಂಜಮ್ಮಳ ಮರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂಜಮ್ಮ ಸತ್ತ ಬಗ್ಗೆ ಶಿವ ಮತ್ತು ಬಸವಣ್ಣ ನನಗೆ ತಿಳಿಸಿದರು. ಮಧ್ಯಾಹ್ನ 3-3.15 ಕ್ಕೆ ನಾನು ಆರೋಪಿತರ ಮನೆಗೆ ಹೋಗಿದ್ದೆನು. ಶಿವ ಮತ್ತು ಬಸವಣ್ಣ ನನ್ನ ಹೆಂಡತಿಯ ಕಡೆಯಿಂದ ಸಂಬಂಧಿಕರು ಎಂದರೆ ನಿಜ. ನಾನು ನೇರವಾಗಿ ಅವರ ಮನೆ ಬಳಿ ಹೋದೆ. ನಂಜಮ್ಮ ವಾಸವಿದ್ದ ರೂಮಿನ ಪೂರ್ವಕ್ಕೆ ಬಾಗಿಲು, ಉತ್ತರಕ್ಕೆ ಸ್ನಾನದ ಮನೆ, ಪಶ್ಚಿಮ ಮತ್ತು ದಕ್ಷಿಣಕ್ಕೆ ಗಲ್ಲಿ ಇದೆ. ಆ ರೂಮಿನ ಉತ್ತರಕ್ಕೆ ಬಾತ್‌ರೂಂ ಮತ್ತು ಟಾಯ್ಲೆಟ್ ಇದೆ. ಸಿದ್ದಚಾರಿ ಮನೆ ಇರುವ ಸೈಟಿನ ಅಳತೆ 20*30 ಅಡಿ ಇದೆ. ಆ ಸಿದ್ದಚಾರಿ ಮನೆಗೂ ಈ ಮೇಲಿನಂತೆ ಚಕ್ಕುಬಂದಿ ಇದೆ. ನಂಜಮ್ಮ ವಾಸವಿದ್ದ ರೂಮಿನ ಪೂರ್ವಕ್ಕೆ ಕಿಟಕಿ ಇತ್ತು. ನಾನು ಹೋದಾಗ ಗೌರಮ್ಮ, ನಾಗಮ್ಮ, ಸಣ್ಣಸೋಮಚಾರಿ, ನಿಂಗಚಾರಿ, ಕಲ್ಪನ, ಶಿವು, ಪ್ರದೀಪ ಮುಂತಾದವರು ಇದ್ದರು. ನಂಜಮ್ಮನ ರೂಮಿಗೆ ಹೊರಗಡೆಯಿಂದ ಲಾಕ್ ಮಾಡಿದ್ದರು. ಆ ರೂಂನ ಕೀ ಯಾವ ಕಂಪನಿಯದ್ದು ಎಂದು ಗೊತ್ತಿಲ್ಲ. ಆ ರೂಮಿನ ಡೋರ್ ಒಳಗಡೆಯಿಂದ ಲಾಕ್ ಆಗಿತ್ತು ಎಂದರೆ ಸರಿಯಲ್ಲ. ನಾವೇ ಆ ಬಾಗಿಲನ್ನು ತೆಗೆಯುವ ಉದ್ದೇಶದಿಂದ ಕಿಟಕಿ ಗ್ಲಾಸ್ ಹೊಡೆದಿದ್ದೇವೆ ಎಂದರೆ ಸರಿಯಲ್ಲ. ನಂಜಮ್ಮಳು ರಾತ್ರಿ ನೈಸರ್ಗಿಕ ಕರೆಗೆ ಹೊರಗೆ ಬಂದಾಗ ಬಿದ್ದು ನಂತರ ವಾಪಸ್ ಹೋಗಿ ಮಲಗಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿತರು ನಂಜಮ್ಮಳಿಗೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈ ಮೊದಲು ಎಲ್ಲಿಯೂ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲಿಗೆ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ದಿನಾಂಕ 5.10.2021 ಮತ್ತು 8.10.2021 ರಂದು ಹೇಳಿಕೆ ನೀಡಿರುತ್ತೇನೆ. ಶವವನ್ನು ನೋಡಿದ ಬಳಿಕ ಅನುಮಾನದಿಂದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆ ಪಡೆದ ಪೋಲಿಸ್ ಅಧಿಕಾರಿಯ ಹೆಸರು ಗೊತ್ತಿಲ್ಲ. ನಾನು ನಂಜಮ್ಮಳ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು

ಹೇಳಿಕೆ ಕೊಡುವಂತೆ ನೋಟಿಸ್ ನೀಡಿರುವುದಿಲ್ಲ, ಆದರೆ ನಮ್ಮನ್ನು ಕರೆದಿದ್ದರು. ಸಿದ್ದಚಾರಿಯ ಮನೆಯಲ್ಲಿ ಪಾಲು ಪಡೆಯುವ ಉದ್ದೇಶದಿಂದ ನನ್ನ ಹೆಂಡತಿ ಮತ್ತು ಅವರ ಸಹೋದರಿಯರ ಜೊತೆ ಶಾಮೀಲಾಗಿ ಮತ್ತು ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.